2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ105/2019</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ರವಿ ಕುಮಾರ್ | | ಪಿಡಬ್ಲೂ - 7 |
| ತಂದೆಯ ಹೆಸರು | - ಲೇಟ್ ಗೋವಿಂದಪ್ಪ | | ಸಿಡಬ್ಲೂ - 11 |
| ವಯಸ್ಸು | - 51 ವರ್ಷ | | |
| ಉದ್ಯೋಗ | - ಗ್ರಾಮ ಸಹಾಯಕ | | |
| ವಾಸ ಸ್ಥಳ | - ದಂದೂರು | | |

ದಿನಾಂಕಃ 26.08.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದಲ್ಲಿ ಹಾಜರಿರುವ 2 ನೇ ಆರೋಪಿ ನಮ್ಮ ಊರಾದ ದಂದೂರಿನವರು. ಆಕೆಯನ್ನು ಬುಕ್ಕಾಂಬೂದಿಯ 3 ನೇ ಆರೋಪಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ನ್ಯಾಯಾಲಯದಲ್ಲಿ ಹಾಜರಿರುವ 1 ಮತ್ತು 4 ನೇ ಆರೋಪಿತರು 2 ಮತ್ತು 3 ನೇ ಆರೋಪಿತರ ಮಕ್ಕಳು. ಭಾಗ್ಯ 2 ನೇ ಆರೋಪಿಯ ತಂಗಿ ಮತ್ತು ಮೂರ್ತಪ್ಪ ಸದರಿ ಭಾಗ್ಯಳ ಗಂಡ. ಗೌತಮ್ ಮತ್ತು ಹರ್ಷಿತಾ ಅಲಿಯಾಸ್ ಮಾನ್ಯ ಶ್ರೀ ಮೇಲೆ ಹೇಳಿದ ಭಾಗ್ಯ ಮತ್ತು ಮೂರ್ತಪ್ಪನ ಮಕ್ಕಳು. ವಿನಯ್ 2 ನೇ ಆರೋಪಿಯ ಅಣ್ಣನ ಮಗ. ಸುಶೀಲಮ್ಮ 2 ನೇ ಆರೋಪಿಯ ತಾಯಿ.

2. ಚಾಸಾ.1 ನನ್ನ ತಮ್ಮ. ಚಾಸಾ.9 ನನ್ನ ತಮ್ಮನ ಹೆಂಡತಿ. ಚಾಸಾ.10 ಮತ್ತು ಮೃತ ಲತಾ ನನ್ನ ತಮ್ಮನ ಮಕ್ಕಳು.

ಚಾಸಾ.12 ನನ್ನ ಅಕ್ಕನ ಮಗ. ಚಾಸಾ.13 ನನ್ನ ಸಂಬಂಧಿ ಮತ್ತು ಆತ 1 ನೇ ಆರೋಪಿಯ ಊರಿನವನು. ಚಾಸಾ.14 ನನ್ನ ತಂಗಿಯ ಮಗಳು.

3. ಲತಾ ಈಗ್ಗೆ 3 ವರ್ಷಗಳ ಹಿಂದೆ ಮೃತ ಪಟ್ಟಿದ್ದಾಳೆ. ಆಕೆಯನ್ನು ಹಗ್ಗದಿಂದ ಕುತ್ತಿಗೆಯನ್ನು ಬಿಗಿದು ಸಾಯಿಸಿ ವೇಲಿನಲ್ಲಿ ನೇಣು ಹಾಕಿ ಕೊಲೆ ಮಾಡಲಾಗಿತ್ತು. 2018 ನೇ ಇಸವಿಯಲ್ಲಿ ಮೃತೆ ಲತಾ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ದ್ವಿತೀಯ ವರ್ಷದ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದಳು ಆ ಸಮಯದಲ್ಲಿ ಆಕೆ ಹಾಸ್ಟೆಲ್ ನಲ್ಲಿ ಉಳಿದುಕೊಂಡಿದ್ದಳು. ಆ ಸಮಯದಲ್ಲಿ ಲತಾಳ ತಂಗಿಯಾದ ಶಿಲ್ಪಾ ಚಿಕ್ಕಮಗಳೂರಿನ ಜೂನಿಯರ್ ಕಾಲೇಜಿನಲ್ಲಿ ಪಿ ಯು ಸಿ ಓದುತ್ತಿದ್ದಳು ಮತ್ತು ಆಕೆಯು ಸಹ ಹಾಸ್ಟೆಲಿನಲ್ಲಿ ನೆಲೆಸಿದ್ದಳು. ನನ್ನ ತಮ್ಮನ ಮಗ ಉದಯ್ ಸಿಂದಿಗೆರೆಯ ಮೊರಾರ್ಜಿ ಶಾಲೆಯಲ್ಲಿ 7 ನೇ ತರಗತಿ ವ್ಯಾಸಂಗ ಮಾಡುತ್ತಿದ್ದನು. ಆ ಸಮಯದಲ್ಲಿ ನಾನು ಚೀರನಹಳ್ಳಿ ವೃತ್ತದಲ್ಲಿ ಗ್ರಾಮ ಸಹಾಯಕನಾಗಿ ಕೆಲಸ ಮಾಡಿಕೊಂಡಿದ್ದೆನು.

4. ಆರೋಪಿತರು ಬುಕ್ಕಾಂಬೂದಿ ಗ್ರಾಮದವರು. ಆ ಸಮಯದಲ್ಲಿ 2 ನೇ ಆರೋಪಿ ಬುಕ್ಕಾಂಬೂದಿ ಗ್ರಾಮದಲ್ಲಿ ಅಂಗನವಾಡಿ ಟೀಚರ್ ಆಗಿ ಕೆಲಸ ಮಾಡುತ್ತಿದ್ದಳು ಮತ್ತು 2 ನೇ ಆರೋಪಿಯ ತಂಗಿಯಾದ ಭಾಗ್ಯಳ ಗಂಡ ಮೂರ್ತಪ್ಪ ತರೀಕೆರೆ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕೆಲಸ ಮಾಡುತ್ತಿದ್ದನು.

5. 2018 ನೇ ಇಸವಿಯಲ್ಲಿ ಲತಾಳನ್ನು 1 ನೇ ಆರೋಪಿ ನಮಗೆ

ಗೊತ್ತಿಲ್ಲದಂತೆ ಮದುವೆ ಮಾಡಿಕೊಂಡಿದ್ದನು. ದಂದೂರಿನಿಂದ ಬುಕ್ಕಾಂಬೂದಿಗೆ ಹೋಗಿ ಬರುವವರು ಆ ರೀತಿ 1 ನೇ ಆರೋಪಿ ಲತಾಳನ್ನು ಮದುವೆ ಮಾಡಿಕೊಂಡು ಒಂದು ವಾರದ ಬಳಿಕ ಅವರು ಮದುವೆಯಾಗಿರುವ ವಿಚಾರವನ್ನು ನಮಗೆ ತಿಳಿಸಿದರು.

6. 1 ನೇ ಆರೋಪಿಯ ತಂಗಿಯಾದ ಭಾಗ್ಯ ಮತ್ತು ಆಕೆಯ ಗಂಡನಾದ ಮೂರ್ತಪ್ಪ, ಅವರ ಮಕ್ಕಳಾದ ಹರ್ಷಿತ ಮತ್ತು ಗೌತಮ್, ವಿನಯ್, ಸುಶೀಲಮ್ಮ ರವರು ಲತಾಳನ್ನು ಶಿವಮೊಗ್ಗದಿಂದ ಕಲ್ಲತ್ತಗಿರಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅವರೆಲ್ಲರೂ ಸೇರಿ ಲತಾಳ ಮದುವೆಯನ್ನು 1 ನೇ ಆರೋಪಿಯೊಂದಿಗೆ ನೆರವೇರಿಸಿದ್ದಾಗಿ ತಿಳಿಯಿತು.

7. ಲತಾ ಪೊಲೀಸ್ ಇಲಾಖೆಗೆ ಸೇರಲು ಪರೀಕ್ಷೆಯನ್ನು ಬರೆದಿದ್ದಳು. 1 ನೇ ಆರೋಪಿ ಬೋವಿ ಜನಾಂಗದ ಒಬ್ಬ ಹುಡುಗಿಯನ್ನು ಪ್ರೀತಿ ಮಾಡುತ್ತಿದ್ದನು. ಅದನ್ನು ತಪ್ಪಿಸುವ ಸಲುವಾಗಿ ಆರೋಪಿತರು ಲತಾಳಿಗೆ ಪೊಲೀಸ್ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ ಆಕೆಯನ್ನು ಕರೆದುಕೊಂಡು ಹೋಗಿ ಮದುವೆ ಮಾಡಿಕೊಂಡು ಬಂದಿದ್ದರು.

8. ಮದುವೆಯಾದ ಬಳಿಕ ಲತಾ ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಯಲ್ಲಿ ವಾಸವಿರುವುದಾಗಿ ತಿಳಿಯಿತು. ಸ್ವಲ್ಪ ದಿನಗಳ ಕಾಲ ಲತಾ ಮತ್ತು ಆರೋಪಿತರು ಚೆನ್ನಾಗಿದ್ದು ನಂತರ ಆರೋಪಿತರು ಲತಾಳಿಗೆ ಹೊಡೆಯುವುದು, ಬಡಿಯುವುದು

ಮಾಡಿ ಹಿಂಸೆ ಕೊಡುತ್ತಿದ್ದ ವಿಚಾರ ನನಗೆ ಆಕೆ ಮೃತಪಟ್ಟ ದಿನ ತಿಳಿಯಿತು.

9. ಒಮ್ಮೆ ಲತಾ ಆರೋಪಿತರ ಹಿಂಸೆಯಿಂದ ವಿಷ ಕುಡಿದಾಗ ಆರೋಪಿತರು ಆಕೆಯನ್ನು ಗಂಗಗೊಂಡನಹಳ್ಳಿಯಲ್ಲಿರುವ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಆಕೆಗೆ ಹುಷಾರಿಲ್ಲವೆಂದು ಹೇಳಿ ಆಕೆಗೆ ಔಷಧಿ ಕೊಡಿಸಿದ್ದಾಗಿ ತಿಳಿಯಿತು. ಲತಾ ವಿಷ ಕುಡಿದ ವಿಷಯ ತಿಳಿದು ನನ್ನ ತಮ್ಮ ಲತಾಳನ್ನು ಮಾತನಾಡಿಸಿಕೊಂಡು ಬರಲು ಆರೋಪಿತರ ಮನೆಗೆ ಹೋದಾಗ 2 ರಿಂದ 4 ನೇ ಆರೋಪಿತರೆ ನನ್ನ ತಮ್ಮನ ಮೇಲೆ ಗಲಾಟೆ ಮಾಡಿ ನನ್ನ ತಮ್ಮನ ವಿರುದ್ಧ ಅಜ್ಜಂಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ನಂತರ ಸದರಿ ಪೊಲೀಸರು ತೀರ್ಮಾನ ಮಾಡಿ ಕಳುಹಿಸಿದ್ದರು. ಸ್ವಲ್ಪ ಚೆನ್ನಾಗಿ ಇದ್ದರು. ಆದರೆ ಮದುವೆಯಾದ 2-3 ತಿಂಗಳ ಬಳಿಕ ಪುನಃ ಆರೋಪಿತರು ಲತಾಳಿಗೆ ಹಿಂಸೆ ನೀಡಿ ಹಗ್ಗದಲ್ಲಿ ಆಕೆಯ ಕುತ್ತಿಗೆಯನ್ನು ಬಿಗಿದು ಸಾಯಿಸಿ, ವೇಲಿನಿಂದ ನೇಣು ಹಾಕಿದ್ದರು. ಆ ದಿನ ಶನಿವಾರವಾಗಿತ್ತು. ಆದರೆ ನನಗೆ ದಿನಾಂಕ, ತಿಂಗಳು ಮತ್ತು ವರ್ಷ ನೆನಪಿಲ್ಲ. ಮಾರನೇ ದಿನ ಬೆಳಿಗ್ಗೆ 8.30 ಗಂಟೆಗೆ ಬುಕ್ಕಾಂಬೂದಿಯವರು ಮತ್ತು ನಮ್ಮ ಊರಿನವರಿಂದ ಲತಾಳ ಕೊಲೆಯಾಗಿರುವ ವಿಚಾರ ತಿಳಿಯಿತು. ನಂತರ ಬೆಳಿಗ್ಗೆ 9.00 ಗಂಟೆಗೆ ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಗೆ ಹೋದೆವು. ಅಲ್ಲಿ ಪೊಲೀಸರು ಇದ್ದರು. ನಾನು ಅಲ್ಲಿಗೆ ಹೋಗಿ

ನೋಡಿದಾಗ ಆರೋಪಿತರ ಹೆಂಚಿನ ಮನೆಯ ಒಂದು ರೂಮಿನಲ್ಲಿ ಲತಾಳನ್ನು ಅಡಿಕೆ ಮರದ ಬೊಂಬಿಗೆ ನೇತು ಹಾಕಿದ್ದರು. ಆಕೆಯ ತುದಿಕಾಲು ನೆಲಕ್ಕೆ ತಾಕುತ್ತಿತ್ತು. ನಂತರ ಅಲ್ಲಿಗೆ ತಹಶೀಲ್ದಾರ್ ರವರು ಬಂದು ಲತಾಳ ಸಾವಿನ ಬಗ್ಗೆ ವಿಚಾರಿಸಿ ಆಕೆಯ ಶವವನ್ನು ಪರಿಶೀಲಿಸಿ ನಮ್ಮನ್ನು ವಿಚಾರಿಸಿ ಹೇಳಿಕೆಗಳನ್ನು ಪಡೆದುಕೊಂಡರು.

10. ನಾನು ನೋಡಿದಾಗ ಲತಾಳ ಕತ್ತಿನ ಭಾಗದಲ್ಲಿ ವೈಯರ್ ನಿಂದ ಎಳೆದು ಬಿಗಿದಾಗ ಆಗುವ ಗುರುತು ಕಾಣಿಸಿತು. ಆಕೆಯ ಕಾಲಿನ ಕೆಳಭಾಗದಲ್ಲಿ ಒಂದು ವೈಯರ್ ಬಿದ್ದಿತ್ತು. ವೇಲಿನಿಂದ ಆಕೆಯ ಶವವನ್ನು ನೇತು ಹಾಕಲಾಗಿತ್ತು. ಲತಾಳ ಶವವನ್ನು ನೇಣಿನಿಂದ ಕೆಳಗೆ ಇಳಿಸಿ ನೋಡಿದಾಗ ಆಕೆಯ ಕೈನಲ್ಲಿ ಗಾಜಿನ ಬಳೆಯಿಂದ ಕುಯ್ದು ಗುರುತು, ಕಾಲಿನ ಮೇಲೆ ಒಂದು ರೀತಿಯ ಹಸಿ ಗಾಯ, ವೇಲಿನಿಂದ ನೇಣು ಹಾಕಿದ್ದ ಗುರುತು ಕಂಡು ಬಂದವು.

11. ಸಾಕ್ಷಿಯು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿರುವ ಫೋಟೋದಲ್ಲಿ ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಯ ಬೆಡ್ ರೂಮಿನಲ್ಲಿ ಲತಾಳನ್ನು ವೈಯರ್ ಹಗ್ಗದಿಂದ ಕುತ್ತಿಗೆ ಬಿಗಿದು ಸಾಯಿಸಿ, ಅಡಿಕೆ ಬೊಂಬಿಗೆ ವೇಲಿನಿಂದ ನೇಣು ಹಾಕಿರುವುದು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ.

12. ಸಾಕ್ಷಿಯು ಈಗಾಗಲೇ ನಿಪಿ.9 ಎಂದು

ಗುರುತಿಸಲಾಗಿರುವ ಫೋಟೋವನ್ನು ನೋಡಿ ಅದರಲ್ಲಿ ಲತಾಳ ಮೃತ ದೇಹವನ್ನು ನೇಣಿನಿಂದ ಕೆಳಗೆ ಇಳಿಸಿ ಮಲಗಿಸಿರುವುದು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ.

13. ನಾನು ಹೋಗಿ ನೋಡಿದಾಗ ಲತಾಳು ಮೃತಪಟ್ಟ ರೂಮಿನ ನೆಲದ ಮೇಲೆ ಬಿದ್ದಿದ್ದ ವೈಯರ್ ಮತ್ತು ಆಕೆಯನ್ನು ನೇಣು ಹಾಕಿದ್ದ ವೇಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪ್ಲಾಸ್ಟಿಕ್ ವೈಯರ್ ಮತ್ತು ಬಿಳಿ ಬಣ್ಣದ ಮೇಲೆ ತಿಳಿ ಕೇಸರಿ ಬಣ್ಣದ ಹೂವುಗಳ ಚಿತ್ರವಿರುವ ವೇಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.2 ಮತ್ತು 3 ಎಂದು ಗುರುತಿಸಲಾಗಿದೆ.

14. ಮು.ಮಾ.2 ವೈಯರ್ ಈಗಾಗಲೇ ನಿಪಿ.4 ಮತ್ತು ನಿಪಿ.10 ಎಂದು ಗುರುತಿಸಲಾಗಿರುವ ಫೋಟೋಗಳಲ್ಲಿ ಕಂಡು ಬರುತ್ತದೆ. ಸಾಕ್ಷಿಯು ಈಗಾಗಲೇ ನಿಪಿ.6, 7 ಮತ್ತು ನಿಪಿ.8 ಎಂದು ಗುರುತಿಸಲಾಗಿರುವ ಫೋಟೋಗಳಲ್ಲಿ ಲತಾಳ ಕುತ್ತಿಗೆ, ಕೈ ಮತ್ತು ಕಾಲಿನಲ್ಲಿ ಆಗಿದ್ದ ಗಾಯಗಳು ಕಂಡು ಬರುತ್ತವೆ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದು ಆಕೆಯ ಕೈ ಮತ್ತು ಕಾಲುಗಳಲ್ಲಿ ಯಾವುದರಿಂದಲೋ ಚುಚ್ಚಿದ್ದ ಹಸಿ ಗಾಯಗಳು ಕಂಡು ಬರುತ್ತವೆ ಎನ್ನುತ್ತಾರೆ. 1 ನೇ ಆರೋಪಿ ಡ್ರೈವಿಂಗ್ ಕೆಲಸ ಮಾಡಿಕೊಂಡಿದ್ದನು.

15. ಪೊಲೀಸರು ಮತ್ತು ತಹಶೀಲ್ದಾರ್ ರವರು ನನ್ನನ್ನು ವಿಚಾರಿಸಿದ್ದಾರೆ. ಆಗ ನಾನು ಅವರಿಗೆ ಮೇಲೆ ತಿಳಿಸಿದ

ವಿಷಯಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ.

16. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ಹೊರತುಪಡಿಸಿ ನಾನು ಮೇಲೆ ಹೆಸರಿಸಿರುವ ಇತರೆ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

17. ದಿನಾಂಕ 19.04.2019 ರಂದು ರಾತ್ರಿ 7.00 ಗಂಟೆ ಸಮಯಕ್ಕೆ ಲತಾ ಆಕೆಯ ದೊಡ್ಡಮ್ಮನಾದ ರತ್ನಮ್ಮಳಿಗೆ ಕರೆ ಮಾಡಿ 1 ನೇ ಆರೋಪಿ ಆಟೋವನ್ನು ಖರೀದಿ ಮಾಡಲು ರೂ.50,000/- ಹಣವನ್ನು ಆಕೆಯ ತಂದೆಯಿಂದ ತೆಗೆದುಕೊಂಡು ಬರುವಂತೆ ಹಿಂಸೆ ಕೊಡುತ್ತಿದ್ದಾಗಿ ತಿಳಿಸಿದ ವಿಚಾರ ನಿಮಗೆ ಗೊತ್ತಾಯಿತು ಎಂದರೆ ಸರಿ. ನಂತರ ಅದೇ ದಿನ ರಾತ್ರಿ 10.00 ಗಂಟೆ ಸಮಯಕ್ಕೆ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಮತ್ತು ಮೂರ್ತಪ್ಪ, ಆತನ ಹೆಂಡತಿ ಭಾಗ್ಯ, ವಿನಯ್, ಸುಶೀಲಮ್ಮರವರುಗಳ ಚಿತಾವಣೆಯಿಂದ ಅವರೆಲ್ಲಾ ಸೇರಿ ಹಿಂಸೆ ಕೊಟ್ಟು ರಾತ್ರಿ ಯಾವುದೋ ಸಮಯದಲ್ಲಿ ಲತಾಳ ಕೊರಳಿಗೆ ಹಗ್ಗದಿಂದ ಎಳೆದಾಗ ಹಗ್ಗ ತುಂಡಾಗಿರುತ್ತದೆ ನಂತರ ಅವಳ ವೇಲಿನಿಂದ ಮೇಲ್ಛಾವಣಿಯ ಅಡಿಕೆ ಬೊಂಬಿಗೆ ಅವಳೇ ಆತ್ಮಹತ್ಯೆ ಮಾಡಿಕೊಂಡಂತೆ

ತಿಳಿದುಕೊಳ್ಳಲಿ ಎಂದು ಸಾಯಿಸಿ ನೇಣು ಹಾಕಿರುತ್ತಾರೆ ಎಂದು ತಹಶೀಲ್ದಾರ್ ರವರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿ. ಲತಾಳ ಸಾವಿಗೆ ಪೊಲೀಸ್ ಮೂರ್ತಪ್ಪ, ಆತನ ಹೆಂಡತಿ ಭಾಗ್ಯ, ಬಸವರಾಜ, ಸುವರ್ಣಮ್ಮ, ವಿನಯ್, ಸುಶೀಲಮ್ಮ, ಗೌತಮ್, ಹರ್ಷಿತ್ ರವರು ಕಾರಣರಾಗಿರುತ್ತಾರೆ ಎಂದು ತಹಶೀಲ್ದಾರ್ ರವರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿ.

(ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.